# ಸೋಮವಾರ, ೨೩ನೇ ಡಿಸೆಂಬರ್, ೧೯೪೬

ಅನಂತರ ಶಾಸನ ಸಭೆಯು ಸರ್ವಸದಸ್ಯರ ಅಧಿವೇಶನದಲ್ಲಿ ಸೋಮವಾರ, ೨೩ನೇ ಡಿಸೆಂಬರ್, ೧೯೪೬ ರಂದು ಅಪರಾಹ್ನ ಒಂದು ಗಂಟೆ ಮೂವತ್ತೈದು ನಿಮಿಷಕ್ಕೆ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## ಕಾರ್ಯವಿಧಾನಗಳ ನಿಯಮಗಳ ಅಂಗೀಕಾರ

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಮಂಡಿಸಲು ಅನುಮತಿ ಕೋರುತ್ತೇನೆ.....

**ಮಾನ್ಯ ಅಧ್ಯಕ್ಷರು** : ಸಮಿತಿಯ ಹಂತ ಮುಗಿದಿದೆ. ಈಗ ನಾವು ಪೂರ್ಣಾಧಿವೇಶನವನ್ನು ನಡೆಸುತ್ತಿದ್ದೇವೆ. ಸಮಿತಿಯು ಅಂಗೀಕರಿಸಿದ ನಿಯಮಗಳನ್ನು ನಾವು ಅಂಗೀಕರಿಸಬೇಕೆಂದು ಶ್ರೀ ಮುನ್ಷಿ ಮಂಡಿಸುತ್ತಾರೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ನಾನು ಮಂಡಿಸಲು ಬಯಸುವುದೇನೆಂದರೆ :

"ನಾವು ಅಂಗೀಕರಿಸಿದ ನಿಯಮಗಳಲ್ಲಿ ತದ್ವಿರುದ್ಧವಾದದ್ದು ಏನೇ ಇದ್ದರೂ ಈ ಸಭೆಯಲ್ಲಿ ಈವರೆಗೆ ತೆಗೆದುಕೊಂಡಿರುವ ಎಲ್ಲ ನಡವಳಿಗಳೂ ಸಿಂಧುವಾಗಿ ಮತ್ತು ಸಕ್ರಮವಾಗಿ ಇರುತ್ತವೆ."

ಚುನಾವಣೆಗಳನ್ನು ನಡೆಸುವುದು ಇತ್ಯಾದಿ, ಮತ್ತು ಅಧಿಕಾರಿಗಳ ನೇಮಕ ಇತ್ಯಾದಿಗಳನ್ನು ಕುರಿತು ನಿಯಮ ನಿಬಂಧನೆಗಳನ್ನು ನಾವು ಅಂಗೀಕರಿಸಿದ್ದೇವೆ. ಇಲ್ಲಿಯವರೆಗೆ ನಾವು ಯಾವುದನ್ನೆಲ್ಲ ಮಾಡಿದ್ದೇವೆಯೋ, ನಾವು ಏನೆಲ್ಲ ನಿಯಮಗಳನ್ನು ಮಾಡಿದ್ದೇವೆಯೋ ಅವು ಎಲ್ಲ ಸಿಂಧುವಾಗಿರುತ್ತವೆ.

**ಮಾನ್ಯ ಅಧ್ಯಕ್ಷರು** : ನಿಯಮಗಳನ್ನು ಅಂಗೀಕರಿಸಿದ ಮೇಲೆ ಅದು ಉದ್ಭವಿಸುತ್ತದೆ.

**ಶ್ರೀ ಕೆ.ಎಮ್. ಮುನ್ಷಿ** : (ಬಾಂಬೆ : ಸಾಮಾನ್ಯ) : ಸದನದ ಸಮಿತಿಯಿಂದ ಅಂಗೀಕೃತವಾದ ರೀತಿಯಲ್ಲಿರುವ ನಿಯಮಗಳನ್ನು ಈಗ ಸಭೆಯು ತನ್ನ ಸರ್ವಸದಸ್ಯರ ಅಧಿವೇಶನದಲ್ಲಿ ಅಂಗೀಕರಿಸಬೇಕೆಂದು ನಾನು ಮಂಡಿಸುತ್ತಿದ್ದೇನೆ.

**ಡಾ. ಪಿ. ಸುಬ್ಬರಾಯನ್** (ಮದ್ರಾಸ್ : ಸಾಮಾನ್ಯ) : ನಾನು ಅದನ್ನು ಅನುಮೋದಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ನಾನು ಈ ನಿಯಮಗಳನ್ನು ಸದನದ ಮತಕ್ಕೆ ಹಾಕುತ್ತೇನೆ.

ಸದನದ ಸಮಿತಿಯಿಂದ ಅಂಗೀಕೃತವಾದ ರೀತಿಯಲ್ಲಿರುವ ಈ ನಿಯಮಗಳನ್ನು ಅಂಗೀಕರಿಸಲಾಯಿತು.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ಮಂಡಿಸಲು ಅನುಮತಿಯನ್ನು ಕೋರುತ್ತೇನೆ, ಅದೆಂದರೆ:

"ಇಂದು ಅಂಗೀಕರಿಸಿದ ನಿಯಮಗಳಲ್ಲಿ ತದ್ವಿರುದ್ಧವಾದದ್ದು ಏನೇ ಇದ್ದರೂ, ಈ ಸಭೆಯಲ್ಲಿ ಈವರೆಗೆ ತೆಗೆದುಕೊಂಡಿರುವ ಎಲ್ಲ ನಡವಳಿಗಳೂ ಸಿಂಧುವಾಗಿ, ಯುಕ್ತವಾಗಿ ಮತ್ತು ಬಂಧಕವಾಗಿ ಇರಬೇಕೆಂದು ಭಾವಿಸತಕ್ಕದ್ದು."

**ಶ್ರೀ ಕೆ.ಎಮ್. ಮುನ್ಷಿ** : ಈ ಸದನವು ಮಾಡಿರುವ ಎಲ್ಲ ಸಂಗತಿಗಳು ಬಹುಮತದಿಂದಲೇ

ಮಾಡಲಾದವುಗಳು ಎಂದು ನಾನು ಅರಿಕೆಮಾಡಿಕೊಳ್ಳುತ್ತೇನೆ. ನಿಯಮಗಳನ್ನು ಬಹುಮತದಿಂದ ಅಂಗೀಕರಿಸಲಾಗಿದೆ ಮತ್ತು ಅವು ಅಂಗೀಕೃತವಾದ ಮೇಲಷ್ಟೇ ಜಾರಿಗೆ ಬರುತ್ತವೆ. ಆದ್ದರಿಂದ ಹಿಂದೆ ನಾವು ಏನೆಲ್ಲವನ್ನು ಮಾಡಿದ್ದೇವೆಯೋ ಅದನ್ನು ಊರ್ಜಿತಗೊಳಿಸಬೇಕಾದ ಅಗತ್ಯವಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಅದು ಅನಗತ್ಯ ಎಂದು ನಾನು ಭಾವಿಸುತ್ತೇನೆ.

ಈಗ ನಾವು ನಿಯಮಗಳನ್ನು ಅಂಗೀಕರಿಸಿರುವುದರಿಂದ, ಈ ನಿಯಮಗಳ ಅಡಿಯಲ್ಲಿ ಕೆಲವು ಸಮಿತಿಗಳನ್ನು ಚುನಾಯಿಸಬೇಕಾಗಿದೆ. ಈ ಹೊತ್ತು ಅಪರಾಹ್ನ ಒಂದು ಗಂಟೆಯವರೆಗೂ ಈ ಸಮಿತಿಗಳಿಗೆ ನೀವು ಹೆಸರುಗಳನ್ನು ಸೂಚಿಸಬಹುದೆಂದು ನಾನು ನಿನ್ನೆ ಪ್ರಕಟಿಸಿದ್ದೆ. ಒಂದು ಗಂಟೆಗೆ ಮುಂಚೆ ನಾವು ನಿಯಮಗಳನ್ನು ಅಂಗೀಕರಿಸಲಾಗಲಿಲ್ಲ. ಈಗಾಗಲೇ ೧:೩೫ ಆಯಿತು. ಯಾವುದಾದರೂ ನಾಮ ನಿರ್ದೇಶನಗಳನ್ನು ಮಾಡುವಂತಿದ್ದರೆ ನಾನು ಸದಸ್ಯರಿಗೆ ೨ ಗಂಟೆಯವರೆಗೂ ಸಮಯವನ್ನು ಕೊಡುತ್ತೇನೆ. ಅವುಗಳನ್ನು ಕಾರ್ಯದರ್ಶಿಯವರಿಗೆ ಒಪ್ಪಿಸಬಹುದು.

ಚುನಾವಣೆಗಳನ್ನು ನಡೆಸಲು ಮತ್ತು ಮಾಡಲು ಇನ್ನೂ ಉಳಿದಿರಬಹುದಾದ ಬೇರೆ ಯಾವುದೇ ಕೆಲಸಗಳನ್ನು ಮಾಡಲು ನಾವು ೪ ಗಂಟೆಗೆ ಸೇರೋಣ.

**ರಾಯ್ ಬಹಾದೂರೂ ಶ್ಯಾಮನಂದನ ಸಹಾಯ :** ಸಭೆಯ ಮುಂದಿನ ಬೈಠಕ್ ಯಾವಾಗ ಎಂದು ತಿಳಿಯಲು ಕೆಲವು ಸದಸ್ಯರು ಇಷ್ಟಪಡಬಹುದು.

**ಮಾನ್ಯ ಸಭಾಧ್ಯಕ್ಷರು :** ಅದನ್ನು ಆಮೇಲೆ ಪ್ರಕಟಿಸಲಾಗುತ್ತದೆ.

ಅನಂತರ ಸಭೆಯನ್ನು ಭೋಜನ ವಿರಾಮಕ್ಕೆಂದು ಅಪರಾಹ್ನ ೪ ಗಂಟೆಯವರೆಗೆ ಮುಂದೂಡಲಾಯಿತು.

---

ಭೋಜನ ವಿರಾಮದ ಅನಂತರ ಸಭೆಯು ಅಪರಾಹ್ನ ೪ ಗಂಟೆಗೆ ಸಭಾಧ್ಯಕ್ಷರಾದ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸೇರಿತು.

---

**ಮಾನ್ಯ ಸಭಾಧ್ಯಕ್ಷರು :** ಎರಡು ದಿನಗಳ ಅನಂತರ ಸಭೆಯು ಈಗ ಬಹಿರಂಗ ಅಧಿವೇಶನವಾಗಿರುವುದರಿಂದ ದಾಖಲೆ ಪುಸ್ತಕದಲ್ಲಿ ಸಹಿಮಾಡಿಲ್ಲದ ಸದಸ್ಯರು ಯಾರಾದರೂ ಇದ್ದಾರೆಯೇ ಎಂದು ನಾನು ತಿಳಿಯಲು ಬಯಸುತ್ತೇನೆ. ಯಾರಾದರೂ ಇದ್ದರೆ ಅವರು ಈಗ ದಾಖಲೆ ಪುಸ್ತಕದಲ್ಲಿ ದಯವಿಟ್ಟು ಸಹಿಮಾಡಬಹುದು. ಯಾರೂ ಇಲ್ಲ ಎಂದು ಭಾವಿಸುತ್ತೇನೆ.

## ಸಮಿತಿಗಳ ಚುನಾವಣೆ
## ಪರಿಚಯ ಪತ್ರಗಳ ಸಮಿತಿ

**ಮಾನ್ಯ ಸಭಾಧ್ಯಕ್ಷರು :** ನಾವು ಅಂಗೀಕರಿಸಿದ ನಿಯಮಗಳ ಪ್ರಕಾರ ಕೆಲವು ಸಮಿತಿಗಳನ್ನು ನಾವು ಚುನಾಯಿಸಬೇಕಾಗಿದೆ. ಆ ಸಮಿತಿಗಳಿಗೆ ನಾಮ ನಿರ್ದೇಶನಗಳನ್ನು ಸಲ್ಲಿಸಲು ನಾನು ೨ ಗಂಟೆಯನ್ನು ನಿಗದಿಪಡಿಸಿದ್ದೆ. ಈಗ ನಾನು ಒಂದೊಂದೇ ಸಮಿತಿಯನ್ನು ತೆಗೆದುಕೊಂಡು ಚುನಾವಣೆಯನ್ನು ನಡೆಸಬೇಕೇ ಎಂದು ಹೇಳುತ್ತೇನೆ. ನಮಗೆ ಬೇಕಾಗಿರುವಷ್ಟು ಹೆಸರುಗಳು ಮಾತ್ರವಿದ್ದರೆ ಚುನಾವಣೆ ಅಗತ್ಯವಾಗುವುದಿಲ್ಲ. ಮೊದಲು ನಾನು ಪರಿಚಯಪತ್ರಗಳ ಸಮಿತಿಯನ್ನು ತೆಗೆದುಕೊಳ್ಳುತ್ತೇನೆ. ಆ ಸಮಿತಿಗೆ ಐದು ಜನರನ್ನು ಚುನಾಯಿಸಬೇಕಾಗಿದ್ದು ಸೂಚಿತವಾಗಿರುವ ಹೆಸರುಗಳು ಹೀಗಿವೆ.

ಶ್ರೀ ಶರತ್‌ಚಂದ್ರ ಬೋಸ್– ಸೂಚಿಸಿದವರು ಶ್ರೀ ಸತ್ಯನಾರಾಯಣ

ಡಾ. ಪಿ.ಕೆ. ಸೇನ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ.

ಭಕ್ಷಿ ಸರ್ ಟೇಕ್‌ಚಂದ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ.

ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್–ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ.

ಐದು ಹೆಸರುಗಳನ್ನು ಮಾತ್ರ ಸೂಚಿಸಲಾಗಿದೆ. ಈ ನಾಮನಿರ್ದೇಶನಗಳು ಸಿಂಧುವಾಗಿವೆ. ಐದು ಹೆಸರುಗಳನ್ನು ಮಾತ್ರ ಸೂಚಿಸಲಾಗಿರುವುದರಿಂದ ಚುನಾವಣೆಯ ಅಗತ್ಯವಿಲ್ಲ. ಈ ಐದು ಜನರು ಚುನಾಯಿತರಾಗಿದ್ದಾರೆ. (ಹರ್ಷೋದ್ಗಾರಗಳು).

## ಸದನ ಸಮಿತಿ

**ಮಾನ್ಯ ಸಭಾಧ್ಯಕ್ಷರು :** ಅನಂತರ ಸದನ ಸಮಿತಿ. ನಿಯಮಗಳ ಪ್ರಕಾರ ಹನ್ನೊಂದು ಪ್ರಾಂತ್ಯಗಳಿಗೆ ತಲಾ ಒಬ್ಬರಂತೆ ಹನ್ನೊಂದು ಸದಸ್ಯರನ್ನು ಚುನಾಯಿಸಬೇಕು. ಸೂಚಿಸಲಾದ ಹೆಸರುಗಳು ಹೀಗಿವೆ.

ಶ್ರೀ ರಾಧಾನಾಥ್ ದಾಸ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಬಂಗಾಳದಿಂದ)

ಶ್ರೀ ಅಕ್ಷಯಕುಮಾರ್ ದಾಸ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಅಸ್ಸಾಮ್‌ನಿಂದ)

ಶ್ರೀ ದೀಪ್ ನಾರಾಯಣ್ ಸಿನ್ಹ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಬಿಹಾರ್ ನಿಂದ)

ಖಾನ್ ಅಬ್ದುಲ್ ಗಫಾರ್ ಖಾನ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಎನ್. ಡಬ್ಲ್ಯೂ.ಎಫ್.ಪಿ. ಯಿಂದ)

ಶ್ರೀ ಜಯರಾಮ್‌ದಾಸ್ ದೌಲತ್‌ರಾಮ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಸಿಂಧ್ ನಿಂದ).

ಶ್ರೀ ನಂದಕಿಶೋರ್ ದಾಸ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಒರಿಸ್ಸಾದಿಂದ)

ಶ್ರೀ ಮೋಹನ್‌ಲಾಲ್ ಸಕ್ಸೇನಾ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಯು.ಪಿ.ಯಿಂದ)

ಶ್ರೀ ಎಚ್.ವಿ. ಕಾಮತ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಸಿ.ಪಿ.ಯಿಂದ)

ಶ್ರೀ ಆರ್.ಆರ್. ದಿವಾಕರ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಬಾಂಬೆಯಿಂದ)

ಶ್ರೀಮತಿ ಅಮ್ಮು ಸ್ವಾಮಿನಾಥನ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಮದ್ರಾಸ್ ನಿಂದ)

ಪಂಡಿತ್ ಶ್ರೀರಾಮ ಶರ್ಮ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ (ಪಂಜಾಬ್ ನಿಂದ)

ಈ ಹನ್ನೊಂದು ಹೆಸರುಗಳನ್ನು ಈ ಸಮಿತಿಗೆ ಸೂಚಿಸಲಾಗಿದೆ. ಇಲ್ಲಿ ಸ್ಪರ್ಧೆ ಇಲ್ಲದಿರುವುದರಿಂದ ಈ ಸದಸ್ಯರು ಚುನಾಯಿತರಾಗಿದ್ದಾರೆಂದು ಘೋಷಿಸಲಾಗಿದೆ.

## ಹಣಕಾಸು ಮತ್ತು ಸಿಬ್ಬಂದಿ ಸಮಿತಿ

**ಮಾನ್ಯ ಸಭಾಧ್ಯಕ್ಷರು :** ಅನಂತರ ನಾವು ಹಣಕಾಸು ಮತ್ತು ಸಿಬ್ಬಂದಿ ಸಮಿತಿಗೆ ಬಂದಿದ್ದೇವೆ. ಇಲ್ಲಿ ಒಂಬತ್ತು ಜನ ಸದಸ್ಯರಿರಬೇಕು, ಆದರೆ ಹತ್ತು ಹೆಸರುಗಳನ್ನು ಸೂಚಿಸಲಾಗಿದೆ. ನಾನು ಹೆಸರುಗಳನ್ನು ಓದುತ್ತೇನೆ:

ಶ್ರೀ ಸತ್ಯನಾರಾಯಣ ಸಿನ್ಹ – ಸೂಚಿಸಿದವರು ಶ್ರೀ ಕಲಾ ವೆಂಕಟರಾವ್

ಶ್ರೀ ಜೈಪಾಲ್ ಸಿಂಗ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ

ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ

ಶ್ರೀ ಎನ್.ವಿ. ಗಿಬ್ಬನ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ

ಶ್ರೀ ಎನ್.ವಿ. ಗಾಡ್ಗಿಳ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ
ಸೇಠ್ ಗೋವಿಂದ ದಾಸ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ
ಶ್ರೀ ಶ್ರೀಪ್ರಕಾಶ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ
ರಾಜಕುಮಾರಿ ಅಮೃತ್ ಕೌರ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ
ಸರ್ದಾರ್ ಹರ್ನಾಮ್ ಸಿಂಗ್ – ಸೂಚಿಸಿದವರು ಶ್ರೀ ಸತ್ಯನಾರಾಯಣ ಸಿನ್ಹ
ಮಹಾರಾಜಾಧಿರಾಜ ಬಹಾದೂರ್ ಸರ್ ಉದಯ್‌ಚಂದ್ ಮಹ್ತಾಬ್, ಬರ್ದ್ವಾನ್
– ಸೂಚಿಸಿದವರು ಗೌರವಾನ್ವಿತ ಮಹಾರಾಜಾಧಿರಾಜ ಶ್ರೀ ಕಾಮೇಶ್ವರ ಸಿಂಗ್, ದರ್ಭಾಂಗ.

ಈ ಹತ್ತು ಹೆಸರುಗಳನ್ನು ಸೂಚಿಸಲಾಗಿದೆ ಮತ್ತು ಇಲ್ಲಿ ಒಂಬತ್ತು ಸ್ಥಾನಗಳಿವೆ. ಈ ಪ್ರಸಂಗದಲ್ಲಿ ಚುನಾವಣೆಯನ್ನು ನಡೆಸಬೇಕಾಗುತ್ತದೆ.

(ಈ ಹಂತದಲ್ಲಿ ಕೆಲವು ಭಾಷಣಗಳನ್ನು ಮಾಡಲಾಯಿತು. ಸದನದ ಸಮ್ಮತಿಯೊಡನೆ ಅವುಗಳನ್ನು ಕಡತದಿಂದ ತೆಗೆದುಹಾಕಬೇಕೆಂದು ಸಭಾಧ್ಯಕ್ಷರು ಆದೇಶ ನೀಡಿದರು.)

(ಬರ್ದ್ವಾನಿನ ಮಹಾರಾಜಾಧಿರಾಜ ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡರು.)

**ಮಾನ್ಯ ಸಭಾಧ್ಯಕ್ಷರು :** ಈಗ ನಾಮನಿರ್ದೇಶನಗಳ ಸಂಖ್ಯೆಯು ಸಮಿತಿಯ ಸದಸ್ಯರ ಸಂಖ್ಯೆಗೆ ಸಮಾನವಾಗಿರುವುದರಿಂದ, ಈಗ ನಾನು ಈ ಒಂಬತ್ತು ಸದಸ್ಯರು ಚುನಾಯಿತರಾಗಿದ್ದಾರೆಂದು ಘೋಷಿಸುತ್ತೇನೆ. (ಹರ್ಷೋದ್ಗಾರಗಳು).

## ಫೆಡರಲ್ ನ್ಯಾಯಾಲಯಕ್ಕೆ ಪರಾಮರ್ಶೆಗೆ ಒಪ್ಪಿಸುವುದಕ್ಕೆ ಸಂಬಂಧಿಸಿದಂತೆ ಸಭಾಧ್ಯಕ್ಷರ ಹೇಳಿಕೆ – ಮೇ ೧೬ರ ಹೇಳಿಕೆಯ ವ್ಯಾಖ್ಯಾನ

**ಮಾನ್ಯ ಸಭಾಧ್ಯಕ್ಷರು :** ನಾನು ಪ್ರಸ್ತಾವಿಸಬೇಕಾದ ಇನ್ನೊಂದು ಸಂಗತಿ ಇದೆ. ಮೇ ೧೬ರ ಹೇಳಿಕೆಯನ್ನು ಅರ್ಥೈಸುವುದಕ್ಕೆ ಸಂಬಂಧಿಸಿದಂತೆ ಕೆಲವು ಅನುಮಾನಗಳು ಹಾಗೂ ವಿವಾದಾಸ್ಪದ ವಿಷಯಗಳ ಪ್ರಶ್ನೆಯನ್ನು ಫೆಡರಲ್ ನ್ಯಾಯಾಲಯಕ್ಕೆ ಪರಾಮರ್ಶೆಗೆ ಒಪ್ಪಿಸುವುದನ್ನು ಕುರಿತು ನಾವು ಪರಿಗಣಿಸಬೇಕಾಗಬಹುದು ಎಂದು ನಾನು ಹಿಂದೆ ಒಂದು ಸಂದರ್ಭದಲ್ಲಿ ಹೇಳಿದ್ದೆ. ಆ ವಿಚಾರವಾಗಿ ಈ ಸದನದ ಯಾರಾದರೂ ಸದಸ್ಯರಿಂದ ಯಾವುದಾದರೂ ಪ್ರಸ್ತಾವ ಅಥವಾ ಸಲಹೆ ಬರಬಹುದೇನೋ ಎಂದು ಇಷ್ಟು ದಿನಗಳು ನಾನು ಕಾದೆ. ಇಲ್ಲಿಯವರೆಗೆ ಫೆಡರಲ್ ನ್ಯಾಯಾಲಯಕ್ಕೆ ಪರಾಮರ್ಶೆಗೆ ಒಪ್ಪಿಸುವುದಕ್ಕೆ ಸಂಬಂಧಿಸಿದಂತೆ ಯಾವ ಸೂಚನೆಯೂ ಬರಲಿಲ್ಲ. ಆ ವಿಷಯವನ್ನು ಫೆಡರಲ್ ನ್ಯಾಯಾಲಯಕ್ಕೆ ಒಪ್ಪಿಸಬೇಕಾದ ಅಗತ್ಯವಿಲ್ಲ ಎನ್ನುವುದು ಈ ಸದನದ ಆಶಯವಾಗಿದೆ ಎಂದು ನಾನು ತೆಗೆದುಕೊಳ್ಳುತ್ತೇನೆ. (ಹರ್ಷೋದ್ಗಾರಗಳು). ಆದ್ದರಿಂದ ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಸಭೆಯು ಈ ಅಧಿವೇಶನದಲ್ಲಿ ನಾವು ನಿರ್ವಹಿಸಬೇಕಾಗಿದ್ದ ಕಾರ್ಯಕಲಾಪಗಳು ಇಲ್ಲಿಗೆ ಮುಕ್ತಾಯವಾಗುತ್ತವೆ. ಈಗ ನಾವು ಮುಂದೂಡಬೇಕಾಗಿದೆ. ನಾವು ಅಂಗೀಕರಿಸಿದ ನಿಯಮಗಳ ಪ್ರಕಾರ ಸಭಾಧ್ಯಕ್ಷರಿಗೆ ಈ ಶಾಸನ ಸಭೆಯ ಒಂದು ಅಧಿವೇಶನವನ್ನು ಮೂರು ದಿನಗಳಿಗಿಂತ ಹೆಚ್ಚು ಕಾಲ ಮುಂದೂಡುವ ಅಧಿಕಾರ ಇಲ್ಲ. ಸದನವನ್ನು ಮೂರುದಿನಗಳಿಗಿಂತ ಹೆಚ್ಚಿನ ಕಾಲ ಮುಂದೂಡಲು ಅವರು ಬಯಸಿದರೆ ಹಾಗೆ ಮಾಡಲು ಈ ಸಭೆಗೆ ಆ ಅಧಿಕಾರ ಇದೆ. ಈ ಸದನವನ್ನು ೨೦ನೇ ಜನವರಿ, ೧೯೪೭ರ

ಬೆಳಗ್ಗೆ ೧೧ ಗಂಟೆಗೆ ಮುಂದೂಡಬೇಕೆಂದು ನಾನು ಸೂಚಿಸುತ್ತೇನೆ. ಈ ಸದನದ ಆಶಯವೂ ಅದೇ ಆಗಿದ್ದರೆ ನೀವು ಅದನ್ನು ಸೂಚಿಸಬಹುದು.

**ಗೌರವಾನ್ವಿತ ಸದಸ್ಯರು** : "ಹೌದು."

**ಮಾನ್ಯ ಸಭಾಧ್ಯಕ್ಷರು** : ಈಗ ಈ ಸದನವನ್ನು ೨೦ನೇ ಜನವರಿ, ೧೯೪೭ರ ಬೆಳಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

ಅನಂತರ ಸಭೆಯನ್ನು ಸೋಮವಾರ, ೨೦ನೇ ಜನವರಿ, ೧೯೪೭ರ ಬೆಳಗ್ಗೆ ೧೧ ಗಂಟೆಗೆಯವರೆಗೆ ಮುಂದೂಡಲಾಯಿತು.